ಷರಾ.—ಹಾದಿಯು ಇದರಡೀ ಕಂಡ ಹಕ್ಕುಗಳು ಬ್ಯಾಕಿನಲ್ಲಿ ಕೊಡಲ್ಪಟ್ಟಿರುತ್ತವೆ :—

1. ಸರ್ವೆ ನಂ. 11ರ ಹದ್ದುವಿಂಗಡಿಸಲ್ಪಟ್ಟ ಲೈನಿನಲ್ಲಿ ಹಾದಿಯು ಹಕ್ಕು ಕಂಬದಹಳ್ಳಿ ಗ್ರಾಮಸ್ಥರ ದನಗಳಿಗೋಸ್ಕರ ಅವರ ಗೋಮಾಳ ಭೂಮಿಗಳಿಗೆ ಕೊಡಲ್ಪಟ್ಟಿರುತ್ತದೆ. ಈ ಹಾದಿಯು ಕಂಬದಹಳ್ಳಿಯ ಸರ್ವೆ ನಂ. 13ರ ಆಗ್ನೇಯ ಮೂಲೆಯಲ್ಲಿ ಹೊರಟು ಅದೇ ಗ್ರಾಮದ ಸರ್ವೆ ನಂ. 10ರ ಆಗ್ನೇಯ ಮೂಲೆಯಲ್ಲಿ ಆಖೈರಾಗುತ್ತದೆ. ಇದು 792 ಗಜಗಳು ಉದ್ದ ಮತ್ತು 22 ಗಜಗಳು ಅಗಲವುಳ್ಳದ್ದಾಗಿದೆ.

2. ಕಂಬದಹಳ್ಳಿಯ ಸರ್ವೆ ನಂ. 10ರಲ್ಲಿ ಹಾಲಿ ಇರುವ ಕಾಲಹಾದಿಯು 22 ಗಜಗಳ ಅಗಲಕ್ಕೆ ಸದರೀ ಗ್ರಾಮದ ದನಗಳಿಗೋಸ್ಕರ 418 ಗಜಗಳ ದೂರದಲ್ಲಿ ಕೊಳದವರಿಗೆ ಅಗಲ ಪಡಿಸಲ್ಪಡುವದು. ಈ ಹಾದಿಯು ಫಾರೆಸ್ಟ್ಸನ್ನು ಸದರೀ ಸರ್ವೆ ನಂ. 10ರ ಆಗ್ನೇಯ ಮೂಲೆಯಲ್ಲಿ ಪ್ರವೇಶಿಸಿ ಉತ್ತರ ದಿಕ್ಕಾಗಿ ಕೊಳಿಬ ವರಿವಿಗೆ ಹೋಗುತ್ತದೆ.

3. ಕಂಬದಹಳ್ಳಿಯಿಂದ ಈ ಗ್ರಾಮದ ಸರ್ವೆ ನಂ. 10ರಲ್ಲಿ ಗೂಲ್ಲಹಳ್ಳಿಗೆ ಹಾಲಿ ಇರುವ ಕಾಲಹಾದಿಯು ಸಹಾ ಬಿಟ್ಟಿರುತ್ತದೆ. ಈ ಹಾದಿಯು ಫಾರೆಸ್ಟನ್ನು ಸರ್ವೆ ನಂ. 10ರ ಆಗ್ನೇಯ ಮೂಲೆಯಲ್ಲಿ ಪ್ರವೇಶಿಸಿ 836 ಗಜಗಳ ದೂರ ಉತ್ತರದಿಕ್ಕಾಗಿ ಹೋಗಿ ಫಾರೆಸ್ಟನ್ನು ಅದೇ ಸರ್ವೆ ನಂ. 10ರ ಈಶಾನ್ಯ ಮೂಲೆಯಲ್ಲಿ ಬಿಟ್ಟುಬಿಡುತ್ತದೆ.

ಹುಕುಂ ಬವೋಜೇಬ್,
ಜಿ. ಇ. ರಿಕೆಟ್ಸ್,
ಫಾರ್ ಫಾರೆಸ್ಟ್ಸ್ ಇಲಾಖೆಯ ಗವರ್ನಮೆಂಟ್ ಅಫೀಷಿಯೇಟಿಂಗ್ ಸೆಕ್ರೆಟರಿ.

ಮುಜರೈ.

ಇಸ್ತಿಹಾರ್ನಾಮೆ.

ತಾರೀಖು 27ನೆ ನವಂಬರು 1903.

ನಂ. 1513—ಮು. ಫೈ. 2—98, ವ್ಯತಪಟ್ಟ ಮು॥ ರಾ॥ ರಾ॥ ವೆಂಕಟರಮಣಯ್ಯನವರು ಮತ್ತು ಮು॥ ರಾ॥ ರಾ॥ ಕರಡಿ ಸಿದ್ದಶೆಟ್ಟರು ಇವರುಗಳಿಗೆ ಖದಲಾಗಿ ಇದರಡೀ ಕಂಡ ದೊಡ್ಡ ಮನುಷ್ಯರುಗಳು ನಂಜಿನಗೂಡು ತಾಲ್ಲೂಕಿನ ಕಳಲೆಪುರದಲ್ಲಿರುವ ಶ್ರೀ ಲಕ್ಷ್ಮೀಕಾಂತ ಸ್ವಾಮಿಯ ದೇವಸ್ಥಾನದ ಧರ್ಮದರ್ಶಿಗಳಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ :—

(1) ಮು॥ ರಾ॥ ರಾ॥ ದೇವರಾಜಭಟ್ಟರು.
(2) ,, ಪೈಡರಾದ ರಾಘವೇಂದ್ರರಾಯರು.

ಹುಕುಂ ಬವೋಜೇಬ್,
ಎಲ್. ಅನಂತಸ್ವಾಮಿ ರಾವ್,
ಮುಜರೈ ಇಲಾಖೆಯ ಡೆಪ್ಯುಟಿ ಸೆಕ್ರೆಟರಿ.

ಮಿಲಿಟರಿ.

ಇಸ್ತಿಹಾರ್ನಾಮೆ.

ತಾರೀಖು 27ನೆ ನವಂಬರ್ 1903.

ನಂ. 1655—7, ಮೈಸೂರ ಶ್ರೀಮತ್ ಮಹಾರಾಜರವರು ಲೋಕಲ್ ಸರ್ವಿಸ್ ರೆಜಿಮೆಂಟಿನಲ್ಲಿ ಇದರಡೀ ಕಂಡ ಬಡ್ತಿಗಳು 1903ನೆ ಅಕ್ಟೋಬರ್ ಗುರ್ಯೇ ತಾರೀಖಿನಾರಭ್ಯ ಮಾಡಿರುತ್ತಾರೆ :—

ಹೆಸರು.	ಯಾವ ದರ್ಜೆಯಿಂದ.	ಯಾವ ದರ್ಜೆಗೆ.
ಲಿಂಗೋಜಿ ಮೋಹಿತೆಯವರು	ದಫೇದಾರ್ ..	ಜಮೇದಾರ್
ಮಹಬೂತ್‌ಖಾರ್ ಯವರು ...	ಡಿಟೋ ..	ಡಿಟೋ

ತಾರೀಖು 27ನೆ ನವಂಬರ್ 1903.

ನಂ. 1658—60, ಮೈಸೂರ ಪೈದಲ್ ಫೂಜಿನ ಮೊದಲನೇ ಪಟೂಲಮಿನಲ್ಲಿ ಇದರಡೀ ಕಂಡ ಬಡ್ತಿಯನ್ನು ಮೈಸೂರ ಶ್ರೀಮತ್ ಮಹಾರಾಜರವರು ಮಂಜೂರ್ಮಾಡಿರುತ್ತಾರೆ :—

ಹೆಸರು.	ಯಾವ ದರ್ಜೆಯಿಂದ.	ಯಾವ ದರ್ಜೆಗೆ.	ಷರಾ.
ಯಮಂತರಾವ್ ಶಾಲಂಕೆ ಯವರು.	ಮೊದಲನೇ ಗ್ರೇಡಿನ ಜಮೇದಾರ್.	ಎರಡನೇ ಗ್ರೇಡಿನ ಸುಬೇದಾರ್	1903ನೆ ಆಗಸ್ಟ್ 21ನೆ ತಾರೀಖಿನಾರಭ್ಯ

ಹುಕುಂ ಬವೋಜೇಬ್,
ಆರ್. ಜಿ. ಜೋನ್ಸ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟರಿ ಅಸಿಸ್ಟೆಂಟ್.